1. ಜತ್ರೋಪ, ಹೊಂಗೆ, ಬೇವು ಮತ್ತು ಹಿಪ್ಪೆ ಸಸಿಗಳನ್ನು ಬೆಳೆಸಿ ರೈತರಿಗೆ ವ್ಯವಸಾಯಕ್ಕೆ ಯೋಗ್ಯವಲ್ಲದ / ಬಂಜರು ಭೂಮಿ ಹಾಗೂ ಬದುಗಳ ಮೇಲೆ ಬೆಳೆಸಲು ಉಚಿತವಾಗಿ ವಿತರಿಸುವುದು.

2. ಹೊಂಗೆ, ಬೇವು, ಹಿಪ್ಪೆ ಮತ್ತು ಸಿಮರೋಬ ಸಸಿಗಳನ್ನು ಕಸಿ ಕಟ್ಟುವುದು ಹಾಗೂ ಕಸಿಕಟ್ಟಿದ ಸಸಿಗಳನ್ನು ರೈತರಿಗೆ / ಇಲಾಖಾ ಕೃಷಿ ಕ್ಷೇತ್ರಗಳಿಗೆ ಉಚಿತವಾಗಿ ವಿತರಿಸುವುದು.

ಇ) ಹಾಸನ ಜಿಲ್ಲೆ ಕೃಷಿ ಕಾಲೇಜಿನ ಮೂಲಕ ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಒಂದನ್ನು ಸ್ಥಾಪಿಸಲು ಸರ್ಕಾರವು 20.1.2007 ರಂದು ಮಂಜೂರಾತಿ ನೀಡಿದೆ.

686 (718) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ 2005-06 ಮತ್ತು 2006-07ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ ; (ಕರಾವಳಿ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಆ) ಮತ್ಸ್ಯ ಮಹಿಳಾ ಸ್ವಾವಲಂಬನೆ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು; ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ ?

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) ಮತ್ಸ್ಯಾಶ್ರಯ 1 ಮತ್ತು 2ನೇ ಹಂತದ ಯೋಜನೆಯಡಿಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ 2005-06 ರಿಂದ ಒಟ್ಟು 462 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ನೀಡಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	2005-06
1	ಮಂಗಳೂರು	36
2	ಉಡುಪಿ	163
3	ಕುಂದಾಪುರ	100

4	ಕಾರ್ಕಳ	08
5	ಕಾರವಾರ	25
6	ಅಂಕೋಲ	06
7	ಕುಮುಟ	54
8	ಹೊನ್ನಾವರ	57
9	ಭಟ್ಕಳ	13
	ಒಟ್ಟು	462

ಮತ್ಸ್ಯಾಶ್ರಯ 3ನೇ ಹಂತದ ಯೋಜನೆಯಡಿ 2006–07ನೇ ಸಾಲಿನಲ್ಲಿ ಕರಾವಳಿ ಜಿಲ್ಲೆಗೆ 790 ಮನೆಗಳನ್ನು ಮಂಜೂರು ಮಾಡಲಾಗಿದೆ. ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿದೆ.

ಆ) ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಗಾಗಿ ಸರ್ಕಾರವು ರೂ.100.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ಸದರಿ ಯೋಜನೆಯಡಿ ಈಗಾಗಲೇ ಒಟ್ಟು 802 ತಂಡಗಳಿಗೆ ಆವರ್ತಕ ನಿಧಿಯನ್ನು ಬಿಡುಗಡೆಗೊಳಿಸಲಾಗಿದೆ.

687 (542) ಶ್ರೀ ಕೃಷ್ಣ ಭೈರೇಗೌಡ (ವೇಮಗಲ್) – ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಹೂವಿನ ಮಾರುಕಟ್ಟೆಯನ್ನು ಸ್ಥಾಪಿಸುವ ಕೆಲಸ ಚಾಲನೆಯಲ್ಲಿದೆಯೇ ;

ಆ) ಇಲ್ಲದಿದ್ದಲ್ಲಿ, ಈ ಯೋಜನೆಗೆ ಮಂಜೂರಾತಿ ಯಾವಾಗ ನೀಡಲಾಗಿದೆ ;

ಇ) ಮಾರುಕಟ್ಟೆ ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರ ಉಪಯೋಗಕ್ಕೆ ಸಮರ್ಪಿಸುವ ಉದ್ದೇಶ ಸರ್ಕಾರಕ್ಕಿದೆಯೇ ;

ಈ) ಹಾಗಿದ್ದಲ್ಲಿ, ಎಷ್ಟು ಅವಧಿಯೊಳಗೆ ಸ್ಥಾಪಿಸಲಾಗುವುದು ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು) :

ಅ) ಹೌದು. ಚಾಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಹೌದು.